ಬಾಲಿವುಡ್

# ಖ್ಯಾತಿಯ ಶಿಖರದಲ್ಲಿ

# ಪ್ರಭಾಸ್



ದಕ್ಷಿಣ ಭಾರತದ ತಾರೆಯರ 'ಬಾಹುಬಲಿ–2' ಚಿತ್ರವನ್ನು ನೋಡಿ ಬಾಲಿವುಡ್‌ನ ದಿಗ್ಗಜರು ಥಂಡಾ ಹೊಡೆದಿದ್ದಾರೆ. ಇಂತಹದ್ದೊಂದು ಸಿನಿಮಾ ಮೊದಲು ಬಾಲಿವುಡ್‌ನವರೇ ಮಾಡಬೇಕಿತ್ತಲ್ಲ... ಎಂದೂ ಕೆಲವರು ಮಾತನಾಡಿಕೊಂಡಿದ್ದಾರೆ. ಮುಂಬೈಯಲ್ಲಿ ವಾರವಿಡೀ 'ಬಾಹುಬಲಿ'ಯದ್ದೇ ಸುದ್ದಿ.

ಎಲ್ಲರ ಕಣ್ಣು ಈಗ ಪ್ರಭಾಸ್ ಮೇಲಿದೆ. ನಾಲ್ಕು ವರ್ಷಗಳ ಕಾಲ ನಿರಂತರ ತಪಸ್ಸಿನಂತೆ ಪಾತ್ರವೊಂದನ್ನು ಧ್ಯಾನಿಸಿ ಪರಕಾಯಪ್ರವೇಶ ಮಾಡಿದ ಪ್ರಭಾಸ್ ಈಗ ಭಾರತದಲ್ಲೇ ಅತ್ಯಂತ ಹೆಚ್ಚು ಪ್ರಚಾರದಲ್ಲಿರುವ ನಟ. ಮೂರೇ ದಿನದಲ್ಲಿ 250 ಕೋಟಿ ರೂಪಾಯಿ ಕಲೆಕ್ಷನ್ ಬಾಚಿಕೊಂಡ 'ಬಾಹುಬಲಿ–2' ಹಿಂದಿಯ 'ದಂಗಲ್' ಸಹಿತ ಹಲವು ಚಿತ್ರಗಳ ದಾಖಲೆಗಳನ್ನು ಮುರಿದಿಕ್ಕಿದೆ. 6 ಅಡಿ 2 ಇಂಚು ಎತ್ತರದ ಪ್ರಭಾಸ್ ಇನ್ನಷ್ಟು ಎತ್ತರಕ್ಕೇರಿದ್ದಾನೆ.

2002ರಲ್ಲಿ 'ಈಶ್ವರ್' ಚಿತ್ರದ ಮೂಲಕ ಟಾಲಿವುಡ್‌ಗೆ ಎಂಟ್ರಿ ಕೊಟ್ಟ ಪ್ರಭಾಸ್‌ಗೆ ಬಾಹುಬಲಿ ಕೊಟ್ಟಿರುವ 'ಲಿಫ್ಟ್' ಅಭೂತಪೂರ್ವ. ನಿರ್ದೇಶಕ ರಾಜಮೌಳಿಯ ಕಲ್ಪನೆಗೆ ಜೀವ ತುಂಬಲು ಮದುವೆಯನ್ನೂ ಮುಂದೂಡಿ ಕುಳಿತ 36ರ ಹರೆಯದ ಪ್ರಭಾಸ್, ದೇಹತೂಕವನ್ನೂ 86 ಕೆ.ಜಿ.ಯಿಂದ 200 ಕೆ.ಜಿ. ಗೆ ಏರಿಸಿಕೊಂಡಿದ್ದ. ಒಂದೇ ಸಿನಿಮಾದ ಪಾತ್ರವೊಂದಕ್ಕೆ ಹೀಗೆ ದೇಹ– ಜೀವನ ಎರಡನ್ನೂ ಮುಡಿಪಾಗಿಡಲು ನಿಜಕ್ಕೂ ದೃಢನಿಷ್ಠೆ ಬೇಕು.

ವರ್ಷಂ, ಡಾರ್ಲಿಂಗ್, ಮಿರ್ಚಿ ಮುಂತಾಗಿ ತೆಲುಗಿನಲ್ಲಿ ಹಲವು ಹಿಟ್ ಚಿತ್ರಗಳಲ್ಲಿ ನಟಿಸಿರುವ ಪ್ರಭಾಸ್, ಹಿರಿಯ ನಟ, ರಾಜಕಾರಣಿ ಕೃಷ್ಣಂರಾಜು ಅವರ ಸೋದರಳಿಯ. ಬಿಇ ಪದವೀಧರ ಪ್ರಭಾಸ್ ಮದುವೆಯಾಗಲಿರುವ ಹುಡುಗಿ ಎಂಜಿನಿಯರಿಂಗ್ ಕಲಿಯುತ್ತಿದ್ದಾಳಂತೆ. ಈಕೆಯನ್ನು ಕೃಷ್ಣಂರಾಜು ಅವರೇ ಹುಡುಕಿದ್ದಾರಂತೆ. ಹುಡುಗಿ ಪ್ರಭಾಸ್‌ಗಿಂತ 10 ವರ್ಷ ಚಿಕ್ಕವಳಂತೆ.

ಬಾಹುಬಲಿ ನಂತರ ಬರಲಿರುವ ಪ್ರಭಾಸ್‌ನ ಹೊಸ ಚಿತ್ರ 'ಸಾಹೊ' ಟ್ರೈಲರ್ ನೋಡಿ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ನಿರ್ದೇಶಕ ಸುಜಿತ್ ಪ್ರಭಾಸ್‌ಗಾಗಿ ಖಡಕ್ ಪೊಲೀಸ್ ಅಧಿಕಾರಿಯ ಪಾತ್ರವನ್ನು ರೂಪಿಸಿದ್ದಾರೆ. ನಿಜಜೀವನದಲ್ಲಿ ಅಮಿತಾಭ್ ಮತ್ತು ಹಾಲಿವುಡ್‌ನ ರಾಬರ್ಟ್ ಡಿ ನೀರೊ ಅಭಿಮಾನಿಯಾಗಿರುವ ಪ್ರಭಾಸ್, ಇಬ್ಬರೂ ನಟಿಸಿರುವ ಪೊಲೀಸ್ ಪಾತ್ರಗಳನ್ನು ಬಹಳವಾಗಿ ಮೆಚ್ಚಿಕೊಂಡವನಂತೆ.

■ ಬಿಂದು